## 66

# “ಪೌಲನೇ, ನೀನು ಅದನ್ನು ಹೇಗೆ ಮಾಡಿದೆ?”

## (21:17-26)

ಸಮಸ್ಯೆಯು ಎದುರಾಗುವದು ಎಂದು ತಿಳಿದು ಪೌಲನು ಯೆರೂಸಲೇಮಿಗೆ ಹೋದನು (ರೋಮಾಪುರ 15:30, 31; ಅಪೊಸ್ತಲರ ಕೃತ್ಯಗಳು 20:22, 23). ಯೆಹೂದ್ಯರು ತಮ್ಮ ಹೆಮ್ಮೆಯ ನಿಮಿತ್ತ, ಪೌಲನು ಅನ್ಯ ಕ್ರೈಸ್ತರಿಂದ ಸಂಗ್ರಹಿಸಿದ ದ್ರವ್ಯವನ್ನು ಸ್ವೀಕರಿಸಲಿಲ್ಲ. ಈ ಹಿಂದೆ ಅವನನ್ನು ವೈರಿಯೆಂದು ಪರಿಗಣಿಸಿದ್ದವರು, ಅವನಿಗೆ ತೊಂದರೆ ನೀಡುವ ಸಾಧ್ಯತೆಯಿತ್ತು. ಅವನು ಬಂಧಿಸಲ್ಪಡುವನು ಎಂದು ಆತ್ಮನು ಮುಂದಾಗಿ ತಿಳಿಸಿದ್ದನು. ಅವನು ಯೆರೂಸಲೇಮಿನ ದಾರಿಯಲ್ಲಿ ಹಾದು ಹೋಗುವಾಗ, ಅವನನ್ನು ಯಾವ ಸಮಯದಲ್ಲಾದರೂ ಜನರು ಹಿಡಿಯಬಹುದೆಂದು ಸೂಕ್ಷ್ಮವಾಗಿ ಗಮನಿಸುತ್ತಿದ್ದನು. ನಂತರ ಅವನು ಸುರಕ್ಷೆಗಾಗಿ ಹಿರಿಯರ ಸಭೆಗೆ ಪ್ರವೇಶಿಸಿದನು - ಆದರೆ ಅಲ್ಲಿ ಅವನಿಗೆ ಅವರು!

> ... ಅವರು ಇದನ್ನು ಕೇಳಿ ದೇವರನ್ನು ಕೊಂಡಾಡಿದರು. ಆಗ ಅವರು ಅವನಿಗೆ ಹೇಳಿದ್ದು - ಸಹೋದರನೇ, ಯೆಹೂದ್ಯರಲ್ಲಿ ಯೇಸುವನ್ನು ನಂಬಿರುವವರು ಎಷ್ಟೋ ಸಾವಿರ ಮಂದಿ ಇದ್ದಾರೆಂಬದನ್ನು ನೋಡುತ್ತೀಯಲ್ಲಾ. ಅವರೆಲ್ಲರೂ ಧರ್ಮಶಾಸ್ತ್ರದಲ್ಲಿ ಅಭಿಮಾನಿಗಳಾಗಿದ್ದಾರೆ. ನೀನು ಅನ್ಯ ಜನರಲ್ಲಿ ವಾಸವಾಗಿರುವ ಯೆಹೂದ್ಯರೆಲ್ಲರಿಗೆ - ನಿಮ್ಮ ಮಕ್ಕಳಿಗೆ ಸುನ್ನತಿಮಾಡಿಸ ಬೇಡಿರಿ, ನಿಮ್ಮ ಆಚಾರಗಳನ್ನು ಅನುಸರಿಸಿ ನಡೆಯಬೇಡಿರಿ ಎಂದು ಹೇಳಿ ಮೋಶೆಯ ಧರ್ಮವನ್ನು ತ್ಯಾಗಮಾಡಬೇಕೆಂಬದಾಗಿ ಬೋಧಿಸುತ್ತಿ ಎಂದು ನಿನ್ನ ವಿಷಯದಲ್ಲಿ ಬಹಳವಾಗಿ ಕೇಳಿದ್ದಾರೆ. ಹೀಗಿರುವಲ್ಲಿ ಏನು ಮಾಡಬೇಕು? ನೀನು ಬಂದಿರುವದನ್ನು ಹೇಗೂ ಕೇಳುವರು. ಆದಕಾರಣ ನಾವು ನಿನಗೆ ಹೇಳುವ ಕೆಲಸವನ್ನು ಮಾಡು. ನಮ್ಮಲ್ಲಿ ವ್ರತ ಹಿಡಿದವರು ನಾಲ್ಕುಮಂದಿ ಇದ್ದಾರೆ. ನೀನು ಅವರನ್ನು ಕರೆದು ಕೊಂಡುಹೋಗಿ ಅವರೊಡನೆ ನಿನ್ನನ್ನು ಶುದ್ಧಿಮಾಡಿಕೊಂಡು ಅವರು ತಮ್ಮ ವ್ರತವನ್ನುತೀರಿಸಿಕೊಳ್ಳುದಕ್ಕಾಗಿ ಅವರಿಗೋಸ್ಕರ ಹಣವೆಚ್ಚ ಮಾಡು. ಹೀಗೆ ಮಾಡಿದರೆ ಎಲ್ಲರೂ ನಿನ್ನ ವಿಷಯವಾಗಿ ತವು ಕೇಳಿದ ಸುದ್ದಿ ನಿಜವಲ್ಲವೆಂತಲೂ ನೀನಾದರೂ ಧರ್ಮ ಶಾಸ್ತ್ರವನ್ನು ಕೈಕೊಂಡು ನಡೆಯುತ್ತಿ ಎಂತಲೂ ತಿಳುಕೊಳ್ಳುವರು (21:20-24).

ನಮಗೆ ಆಶ್ಚರ್ಯದ ಸಂಗತಿ ಏನೆಂದರೆ, ಅವರ ಅಸಾಮಾನ್ಯವಾದ ಬೇಡಿಕೆ ಯನ್ನು ಪೌಲನು ಮನ್ನಿಸಿದನು: “ಆಗ ಪೌಲನು ಆ ಮನುಷ್ಯರನ್ನು ಕರೆದು ಕೊಂಡು ಮರುದಿನ ಅವರೊಡನೆ ತನ್ನನ್ನು ಶುದ್ಧಿಮಾಡಿಕೊಂಡು ವ್ರತದ ದಿವಸಗಳು ಮುಗಿದವೆಂದು ತಿಳಿಸುವವನಾಗಿ ದೇವಾಲಯದೊಳಗೆ ಹೋದನು. ಪ್ರತಿಯೊಬ್ಬನಿಗೋಸ್ಕರ ಮಾಡಬೇಕಾದ ಅರ್ಪಣೆಯನ್ನು ಮುಂದೆ ಅರ್ಪಿಸಬೇಕಾಗಿತ್ತು” (ವಚನ 26). ಅದರಲ್ಲಿ ದೋಷಪರಿಹಾರಕ ಯಜ್ಞವು ಸಹ ಒಳಗೊಂಡದ್ದರಿಂದ, “ಪೌಲನು ಏಕೆ ಹೀಗೆ ಮಾಡಿದನು?” ಎಂಬ ಪ್ರಶ್ನೆಯನ್ನು ಕೇಳುತ್ತೇವೆ.

ಅವನು ಮಾಡಿದ್ದು ಸರಿಯೇ ಅಥವಾ ತಪ್ಪೆ? ಎಂಬ ಪ್ರಶ್ನೆಯು ಮನಸ್ಸಿನಲ್ಲಿ ಉದ್ಭವಿಸುತ್ತದೆ. ಒಂದು ವೇಳೆ ನಾವು ಈ ದಿನಗಳಲ್ಲಿ ಯೆಹೂದ್ಯರಾಗಿದ್ದರೆ, ಆ ಯಜ್ಞಗಳು ನಮಗೆ ಸಮಂಜಸವಾಗುತ್ತಿದ್ದವೇ? ಈ ಪ್ರಶ್ನೆಗಳ ಚರ್ಚೆಯನ್ನು ಈ ಪಾಠದಲ್ಲಿ ನೋಡುತ್ತೇವೆ.

## ಮನುಷ್ಯನ ತಿಕ್ಕಾಟದ ಮಾತುಗಳು

ಈ ಒಂದು ಪ್ರಶ್ನೆಯಿಂದ ನಾವು ಪ್ರಾರಂಭಿಸೋಣ, "ಹಿರಿಯರ ಬೇಡಿಕೆಗಳಿಗೆ ಪೌಲನು ಮಾನ್ಯತೆ ನೀಡಿದನೇ?" ಇದರ ಕುರಿತು ಸಮಾಧಾನಕರವಾದ ಅಭಿಪ್ರಾಯಗಳು ಮೂಡುವದಿಲ್ಲ - ಗೌರವಾನ್ವಿತ ಕ್ರೈಸ್ತ ಪಂಡಿತರಲ್ಲಿಯೂ ಉತ್ತರ ದೊರಕುವದಿಲ್ಲ. ಆದಾಗ್ಯೂ ನಾನು ನಾಲ್ಕು ದೃಷ್ಟಿಕೋನದಿಂದ, ಉತ್ತರವನ್ನು ನೀಡಲು ಪ್ರಯತ್ನಿಸುತ್ತೇನೆ:

**ಯೋಗ್ಯಕರವಲ್ಲದ ಒಂದು "ಹೌದು!" ಎಂಬ ಉತ್ತರ**

ಯೋಗ್ಯಕರವಲ್ಲದ "ಹೌದು!" ಎಂಬ ಉತ್ತರವನ್ನು ಕೆಲವರು ನೀಡುವರು. ಪೌಲನ ಮತ್ತು ಹಿರಿಯರು ಯೋಗ್ಯವಾದ ಕಾರ್ಯವನ್ನೇ ಮಾಡಿದರು ಎಂಬ ಅಭಿಪ್ರಾಯ ನೀಡುವರು, ಅವರು ಮಾಡಿದಂಥದ್ದು, ಸಮಯಕ್ಕನುಗುಣವಾಗಿ ಯೋಗ್ಯವಾದದ್ದರಿಂದ, ಅವುಗಳನ್ನು ಪಾಲಿಸಬೇಕಿತ್ತು. ಪೌಲನು ಹೇಳಿದ ಮಾತಿನಂತೆ, "ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥವನಾಗಬೇಕೋ, ಅಂಥವನಾಗಿದ್ದೇನೆ" (1 ಕೊರಿಂಥ 9:22ಬಿ), ಎಂಬುದನ್ನು ಕೆಲವರು ಪ್ರತಿಪಾದಿಸುತ್ತಾರೆ ಹಾಗೂ ಬಲಹೀನ ಸಹೋದರರರನ್ನು ಬಲಪಡಿಸುವಂಥ ರೋಮಾಪುರ 14ನ್ನು ಬಳಸುತ್ತಾರೆ.

ಪೌಲ ಮತ್ತು ಹಿರಿಯರು ಮಾಡಿದ ಕಾರ್ಯ ಸರಿಯಾಗಿಯೇ ಇತ್ತು, ಹೇಗೂ ಲೂಕನು ಅವರನ್ನು ಖಂಡಿಸದೆ, ಪೌಲನು ಮನಸ್ಸಾಕ್ಷಿಗೆ ಯೋಗ್ಯವಾದದ್ದನ್ನೆ ಮಾಡಿದನು ಎಂಬುದು ಈ ಮೊದಲ ಗುಂಪಿನವರ ವಾದವಾಗಿದೆ (23:1). ಪೌಲನು ಜನರಲ್ಲಿ ಸಹಮತವನ್ನು ಬಯಸಿ, ಸಿದ್ಧಾಂತವನ್ನು ಪ್ರತಿಪಾದನೆ ಮಾಡುವ ಬದಲು, ಶಾಂತಿಯನ್ನು ಉಂಟುಮಾಡುವದು ಅವನ ಪ್ರಮುಖ ಕಾರ್ಯವಾಗಿತ್ತು ಎಂದು ಹೇಳುವರು.

ಈ ಸನ್ನಿವೇಶದ ಕೆಲವು ಉದ್ದೇಶಗಳನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ, ಆದರೆ ಎಲ್ಲವನ್ನು ಅರ್ಥಮಾಡಿಕೊಳ್ಳುವದಿಲ್ಲ. ಅವನ ಮೇಲೆ ಬರಬಹುದಾದ ಅಪವಾದವನ್ನು ತಪ್ಪಿಸಿಕೊಳ್ಳಲು ಇದನ್ನು ಮಾಡಿದ್ದರೂ, ಪೌಲ ಮತ್ತು ಹಿರಿಯರ ಈ ಕೃತ್ಯವನ್ನು ಮೆಚ್ಚುವದು ದೂರದ - ಸಂಗತಿಯಾಗಿರುತ್ತದೆ.

ಅನ್ಯರನ್ನು ಸತ್ಯದ ಜ್ಞಾನಕ್ಕೆ ತರುವ ಉದ್ದೇಶಕ್ಕಾಗಿ, ಪೌಲನು ಎಲ್ಲರಿಗೂ ಎಲ್ಲರಂಥಾದನೇ ವಿನಃ ನಂಬುವವರಿಗಾಗಿ ಆಗಲಿಲ್ಲ. ಒಂದು ವೇಳೆ, ಯೆರೂಸಲೇಮಿನಲ್ಲಿದ್ದ ಅನ್ಯರಿಗಾಗಿ ಎಂದು ಪರಿಗಣಿಸಿದರೂ, ಅವನು ಪ್ರಸಿದ್ಧಿ ಹೊಂದಿ, ಯೆಹೂದ್ಯರಲ್ಲಿ ಸುವಾರ್ತೆ ಸಾರಲು ಸುಲಭವಾ ಗಲಿಲ್ಲ (9:29; 22:17-21).[1]

ವ್ಯತ್ಯಾಸವಾದ ಆಚರಣೆಗಳ ಕುರಿತು ರೋಮಾಪುರ 14ರಲ್ಲಿ ಉಲ್ಲೇಖಿಸಲಾಗಿದೆ. ಧರ್ಮಶಾಸ್ತ್ರದಲ್ಲಿ ಮುಂತಿಳಿಸಿರುವ ಕೆಲವು ಆಜ್ಞೆಗಳು ಗುರುತರವಾಗಿದ್ದರು, ಹೊಸ ಒಡಂಬಡಿಕೆಯ ಬೋಧನೆಗಳಿಗೆ ಅವುಗಳು ಪರಿಣಾಮ ಬೀರುವದಿಲ್ಲ (ಏಳನೆ ದಿವಸದ ವಿಶ್ರಾಂತಿ, ತಿನ್ನುವ ವಿಷಯ), ಆದರೆ ಅವನು ಮಾಡಿದ "ದೋಷಪರಿಹಾರದ" ಯಜ್ಞದಲ್ಲಿ "ಖಂಡಿತವಾಗಿಯೂ ವ್ಯತ್ಯಾಸ" ಉಂಟಾಯಿತು.

ಹಿರಿಯರು ಹಾಗೂ ಪೌಲನು ಮಾಡಿದ ಈ ಸಂಗತಿಯು ತಪ್ಪು ಎಂಬುದಕ್ಕೆ ಕುರುಹುಗಳಿಲ್ಲದಿದ್ದರೂ, ಇವರು ಬಳಸಿರುವ ಕುರುಹುಗಳು ಸಮರ್ಥನೆಗೆ ಅಸಾಧ್ಯವಾಗಿದೆ. ಸತ್ಯವೇದದ ಬರಗಾರರು ಹೊಗಳಿಕೆಯನ್ನಾಗಲೀ ಅಥವಾ ಖಂಡನೆಯನ್ನಾಗಲೀ ಮಾಡದೆ, ನೋಹನು ಕುಡಿದು ಮತ್ತನಾಗಿರುವ ವಿಷಯವನ್ನು ಮೋಶೆಯು ಪರಿಗಣಿಸಿದಂತಿರುತ್ತದೆ ಆದಿಕಾಂಡ 9:20, 21. ಹೌದು, ಪೌಲನು ತನ್ನ ಮನೋಧರ್ಮಕ್ಕೆ ವ್ಯತಿರಿಕ್ತವಾಗಿ ವರ್ತಿಸಲಿಲ್ಲ, ಒಂದು ವೇಳೆ ಅವನು ಕ್ರೈಸ್ತರನ್ನು ಹಿಂಸಿಸಿದ ಸಮಯವೂ ಇದರಲ್ಲಿ ಒಳಗೊಂಡಿರಬಹುದು (ಅಪೊಸ್ತಲರ ಕೃತ್ಯಗಳು 8:1, 3). ಹಿರಿಯರ ಮಾತಿಗೆ ಪೌಲನು *ಉದ್ದೇಶ ಪೂರ್ವಕವಾದ* ಸಮ್ಮತಿಯನ್ನು ಸೂಚಿಸಲಿಲ್ಲ; ಇದರಿಂದ ಅವನ ವರ್ತನೆಯನ್ನು ಪ್ರಶ್ನಿಸಲು ಅಸಾಧ್ಯ.

ದೇವರಿಗೆ ವಿಧೇಯರಾಗುವದಕ್ಕಿಂತಲೂ, ಮನುಷ್ಯರ ನಿಯಮವನ್ನು ಪಾಲಿಸಬೇಕು ಎನ್ನುವವರು ಬಹಳ ದೂರವಿರುವವರಾಗಿದ್ದಾರೆ. ಯಾಕೋಬನು ತಿಳಿಸಿರುವಂತೆ (ಸಿದ್ಧಾಂತದ ಅಥವಾ ನೈತಿಕತೆಯ) ಶುದ್ಧತೆಯು, ಸಮಧಾನಕ್ಕಿಂತಲೂ ಮಿಗಿಲಾದದ್ದೆ (ಯಾಕೋಬ 3:17).

**ಯೋಗ್ಯವಾದ "ಹೌದು" ಎಂಬ ಉತ್ತರ**

ಪೌಲನ ಈ ಕ್ರಿಯೆಯು ಯೋಗ್ಯವಾದದ್ದೇ ಎಂದು ಹೇಳುವ ಈ ಎರಡನೇ ಗುಂಪಿನ ಜನರಲ್ಲಿ ಪ್ರಾಯಶಃ ಅನೇಕರಿರಬಹುದು. ಆ ಗೊಂದಲದ ಪರಿಸ್ಥಿತಿಯನ್ನು ಓಟ್ಟಾರೆ ಒಪ್ಪದಿದ್ದರೂ, ಆ ಪರಿಸ್ಥಿತಿಯಲ್ಲಿ ಪೌಲನು ಯೋಗ್ಯವಾದ ಕಾರ್ಯವನ್ನೇ ಮಾಡಿದನು ಎಂದು ಹೇಳುವರು. ಆ ಸನ್ನಿವೇಶಗಳ ಕುರಿತು ಈಗಾಗಲೇ ಚರ್ಚೆಮಾಡಲಾಗಿದೆ. ಪೌಲನಿಗೂ ಹಾಗೂ ಹಿರಿಯರಿಗೂ, ಸಭೆಯಿಂದಲೂ ಮತ್ತು ಹೊರಗಿನಿಂದಲೂ ಉಂಟಾದ ಒತ್ತಾಯದ ನಿಮಿತ್ತ "ಪೌಲನು ಎಲ್ಲರಿಗೂ ಎಲ್ಲರಂತಾದನು." ಇತರೆ ಮೂರು ಸನ್ನಿವೇಶಗಳನ್ನು ಒತ್ತಿಹೇಳಲಾಗಿದೆ:

(1) ಅನುಪಮವಾದ ಯುದಾಯತ್ವ; ಹೊಸ ಒಡಂಬಡಿಕೆಯಲ್ಲಿ ಧಾರ್ಮಿಕ ಹಾಗೂ ನಾಗರೀಕ ನಾಯಕರ ನಡುವೆ ಇರುವ ವ್ಯತ್ಯಾಸಗಳನ್ನು ಬಿಂಬಿಸಲಾಗಿದೆ: "ಕೈಸರನದನ್ನು ಕೈಸರನಿಗೆ ದೇವರದನ್ನು ದೇವರಿಗೆ ನೀಡಬೇಕೆಂದು ಹೇಳಲಾಗಿದೆ" (ಮತ್ತಾಯ 22:21ಬಿ; ಇದನ್ನು ನೋಡಿರಿ 1 ಪೇತ್ರ 2:17). ನಾವು ವಾಸಿಸುತ್ತಿರುವ ಸ್ಥಳದಲ್ಲಿರುವ ನಿಯಮಗಳನ್ನು ಪಾಲಿಸಬೇಕು (ರೋಮಾಪುರ 13:1-7) ಮತ್ತು ಅವುಗಳು ದೇವರ ನಿಯಮಕ್ಕೆ ಅಡ್ಡಿ ಉಂಟುಮಾಡಬಾರದು (ಅಪೊಸ್ತಲರ ಕೃತ್ಯಗಳು 5:29).[2] ಅದಕ್ಕೆ ಒಪ್ಪುವಂತೆ, ಹಳೆ ಒಡಂಬಡಿಕೆಯಲ್ಲಿನ ಧಾರ್ಮಿಕ ಹಾಗೂ ನಾಗರೀಕ ನಾಯಕರ ನಡುವಿನ ನಿಯಮಗಳು ಸಾಮರಸ್ಯವನ್ನು ಹೊಂದಿತ್ತು. ಮೋಶೆಯ ಧರ್ಮಶಾಸ್ತ್ರದಲ್ಲಿ, ಲೌಕಿಕ ಹಾಗೂ ಧಾರ್ಮಿಕ ನಿಯಮಗಳು ಒಳಗೊಂಡಿರುತ್ತವೆ. ಇಸ್ರಾಯೇಲ್ಯರ ನಿಯಮಗಳು ಕೇವಲ ಅವರ ಧಾರ್ಮಿಕ ಚಟುವಟಿಕೆಗಳನ್ನು ನಿಯಂತ್ರಣದಲ್ಲಿಡದೆ, ರಾಷ್ಟ್ರದ ತಂತ್ರಗಳನ್ನೂ ನಿಯಂತ್ರಣದಲ್ಲಿಟ್ಟಿತ್ತು. ಈ ಹಿಂದೆ ಗಮನಿಸಿದಂತೆ, ಯೆಹೂದ್ಯರಲ್ಲಿ ಅನೇಕರು ಧಾರ್ಮಿಕ ಹಾಗೂ ಅವರ ರಾಷ್ಟ್ರದ ನಡುವಿನ ಇದ್ದ ನಿಯಮಗಳ ವ್ಯತ್ಯಾಸವನ್ನು ಅರಿಯದಾದರು. ಯಜ್ಞಕಾರ್ಯಗಳು ರಾಷ್ಟ್ರೀಯ ಸ್ವತ್ತಿನ ಒಂದು ಭಾಗವಾಗಿತ್ತು ಎಂದು ತಿಳಿದಿದ್ದರು - ಕ್ರಿ.ಶ. 70ರಲ್ಲಿ ದೇವಾಲಯವು ನಾಶವಾಗುವವರೆಗೆ, ಈ ವಿಧವಾಗಿ ಯೋಚಿಸಲಾಗಿತ್ತು.

(2) ಒಂದು ಬದಲಾವಣೆ ಹೊಂದುತ್ತಿದ್ದ ಸಮಯವಾಗಿತ್ತು. ನ್ಯಾಯಯುತವಾಗಿ - ಧರ್ಮಶಾಸ್ತ್ರವನ್ನು ಶಿಲುಬೆಗೆ ಹಾಕಲಾಗಿತ್ತು (ಕೊಲೊಸ್ಸೆ 2:14, 16) - ಅದರಲ್ಲಿ ಯಜ್ಞಗಳು ಒಳಗೊಂಡಿವೆ. ಪ್ರಾಯೋಗಿಕವಾಗಿ, ಇಸ್ರಾಯೇಲ್ಯರಿಗೆ ದೇವರು, ಯೂದಾಯತ್ವದಿಂದ, ಕ್ರೈಸ್ತರಾಗುವದಕ್ಕೆ ಅವಕಾಶವನ್ನು ಹಾಗೂ ಸಮಯವನ್ನು ನೀಡಿದ್ದನು.[3] ಆದರಿಂದ ಯೇಸುವಿನ ಮರಣದಲ್ಲೇ ಧರ್ಮಶಾಸ್ತ್ರವು ಇಲ್ಲದಾಯಿತು ಎಂದು ಕೆಲವು ವಾಕ್ಯಭಾಗಗಳು ತಿಳಿಸುತ್ತವೆ (ಉದಾರಣೆ ಎಫೆಸ 2:14, 15), ಇನ್ನು ಕೆಲವು ವಾಕ್ಯಗಳು, ಅವುಗಳು ನಿಧಾನವಾಗಿ ಇಲ್ಲವಾಯಿತು ಎಂದು ತಿಳಿಸುತ್ತವೆ. ಉದಾಹರಣೆ ಇಬ್ರಿಯ 8:13, ಮೊದಲ ಒಡಂಬಡಿಕೆಯಲ್ಲಿದ್ದದ್ದನ್ನು "ಹಳೆದಾಗಿ" ಮಾಡಿದ್ದಾನೆ, "ಆದರೆ ಹಳೇದಾಗುತ್ತಾ ಮುದಿಯಾಗುವಂಥದ್ದಕ್ಕೆ ಅಂತ್ಯವು ಸಮೀಪವಾಗಿದೆ" (ಇದನ್ನು ನೋಡಿರಿ 2 ಕೊರಿಂಥ 3:7-11). ಮಾಥ್ಯು ಹೆನ್ರಿಯವರ ಪ್ರಕಾರ, "ಸಂಸ್ಕಾರ ನಿಯಮಗಳು"[4] ಸತ್ತು ಹೋಗಿದ್ದರೂ, ಅವುಗಳು ಇನ್ನೂ ಹೂಣಲ್ಪಟ್ಟಿರುವದಿಲ್ಲ ಹಾಗದರೆ ಅಂತಿಮವಾಗಿ ದೇವರು ಅವುಗಳನ್ನು ಯಾವಾಗ "ಹೂಣಿಟ್ಟನು"? ಕ್ರಿ.ಶ. 70ರಲ್ಲಿ ದೇವಾಲಯವು ನಾಶವಾದ ಸಮಯದಲ್ಲಿ ದೇವರು ಆ ನಿಯಮಗಳನ್ನು ಇಲ್ಲದಂತೆ ಮಾಡಿದನು ಎಂದು ಅನೇಕರು ಒಪ್ಪುವರು.

ಅದು ಸತ್ಯವಾಗಿದ್ದರೆ ಕ್ರಿ.ಶ. 57ರಲ್ಲಿ, ಯೆಹೂದ್ಯರು ಇನ್ನು ಸಹ ಬದಲಾವಣೆ ಹೊಂದುತ್ತಿದ್ದ ಸಮಯದಲ್ಲಿಯೇ ಜೀವಿಸುತ್ತಿದ್ದರಲ್ಲವೇ. ಆ ಸಮಯದಲ್ಲಿಯೇ ಪೌಲನು ದೇವಾಲಯದೊಳಕ್ಕೆ ಹೋದನು, ಮುಂದಿನ ವಿಚಾರದಲ್ಲಿ ಈ ವಿಚಾರವು ಹೋಲಿಕೆ ಹೊಂದುತ್ತದೆ.

(3) ಕಾಲ - ಕ್ರಮೇಣವಾಗಿ ನೀಡಲ್ಪಟ್ಟ ಪ್ರಕಟನೆ. ದೇವರು ಒಂದೇ ಬಾರಿಗೆ ತನ್ನ ಚಿತ್ತವನ್ನೆಲ್ಲಾ ಪ್ರಕಟಿಸಲಿಲ್ಲ ಎಂದು ಅಪೊಸ್ತಲರ ಕೃತ್ಯದಲ್ಲಿ ವೇದಭ್ಯಾಸ ಮಾಡಿದ್ದೇವೆ, ಆದರೆ ಆತನ ಜನರೇ ಅದನ್ನು ಅರಿತುಕೊಳ್ಳಬೇಕಿತ್ತು. ಉದಾಹರಣೆಗೆ ಪಂಚಾಶತ್ತಮ ದಿನದಲ್ಲಿ ಪೇತ್ರನು, ಅನ್ಯರೂ ಸಹ ದೇವರ ಯೋಜನೆಯಲ್ಲಿ ಒಳಗೊಂಡಿರುವರು ಎಂಬುದನ್ನು ಪ್ರಕಟಿಸಿದನು (ಅಪೊಸ್ತಲರ ಕೃತ್ಯಗಳು 2:39). ಆದರೆ ದೇವರು ಪೇತ್ರನಿಗೆ ವಿಶೇಷವಾದ ದರ್ಶನವನ್ನು (ಅಪೊಸ್ತಲರ ಕೃತ್ಯಗಳು 10). ನೀಡುವವರೆಗೆ ಈ ವಿಷಯವನ್ನು ಗ್ರಹಿಸಿಕೊಳ್ಳಲಿಲ್ಲ. ಪೌಲನು ಈಗಾಗಲೇ ರೋಮಾ ಹಾಗೂ ಕೊರಿಂಥ ಪತ್ರಿಕೆಗಳನ್ನು ಬರೆದಿದ್ದಾಗ್ಯೂ, ಆ ಪುಸ್ತಕಗಳಲ್ಲಿ ಅಡಕವಾಗಿದ್ದ ಯಜ್ಞಗಳ ಕುರಿತ ನ್ಯಾಯಬದ್ಧ ವಾದ ಉಪದೇಶಗಳನ್ನು ಅವನು ಗ್ರಹಿಸಿಕೊಂಡಿರಲಿಲ್ಲ. ಅನೇಕ ವರ್ಷಗಳ ಅಂತರದಲ್ಲಿ ದೇವರು ಈ ವಿಧವಾದ ಪ್ರೇರಿತ ಬರವಣಿಗೆಗಳನ್ನು ಗ್ರಹಿಸುವಂತೆ ಮಾಡುವನು.[5] "ಸರ್ವಾಂಗ ಹೋಮಗಳಲ್ಲಿಯೂ ದೋಷ ಪರಿಹಾರಕ ಯಜ್ಞಗಳಲ್ಲಿಯೂ ನೀನು ಸಂತೋಷಪಡಲಿಲ್ಲ," ಪಾಪಗಳು ಪರಿಹಾರವಾದಲ್ಲಿ ಇನ್ನೂ ಅವುಗಳ ವಿಷಯದಲ್ಲಿ ಸಮರ್ಪಣೆಮಾಡುವದು ಅವಶ್ಯವಿಲ್ಲ (ಇಬ್ರಿಯ 10:6, 18). ಈಗ ದೇವರ ಪ್ರಕಟನೆಯು ಪೂರ್ಣವಾಗಿದೆ (2 ಪೇತ್ರ 1:3; ಯೂದ 3), ಆದರೆ ಪೌಲನು ದೇವಾಲಯದೊಳಗೆ ಹೋದಾಗ ಪೂರ್ಣವಾಗಿರಲಿಲ್ಲ.

"ಸನ್ನಿವೇಶಕ್ಕೆ" ಅನುಗುಣವಾಗಿ ಪೌಲನು ಈ ಕಾರ್ಯವನ್ನು ಮಾಡಿದ್ದನು, ಮೇಲಿನ ಸಂಗತಿಗಳು ವಾಕ್ಯಕ್ಕನುಗುಣವಾಗಿಯೇ ಇರುತ್ತದೆ. ಆದರೆ ಪೌಲನು ದೋಷ ಪರಿಹಾರಕ ಯಜ್ಞಕ್ಕೆ ಮುಂದಾದ ವಿಚಾರವನ್ನು ನಾನು ಒಪ್ಪುವದಿಲ್ಲ - ಯಾಕಂದರೆ ಯೇಸು ಈಗಾಗಲೇ ತಾನೇ ಯಜ್ಞವಾಗಿ ಅರ್ಪಿಸಿಕೊಂಡಿರುವನು. ಈ ವ್ಯತಿರಿಕ್ತವಾದ ಸಂಗತಿಗೆ ವಿಶೇಷ ಗಮನವನ್ನು ನೀಡಬೇಕಾಗುತ್ತದೆ. ಆಡಮ್ ಕ್ಲಾರ್ಕ್‌ರವರು, "ಈ ವ್ಯತ್ಯಾಸವನ್ನು ಪರಿಹರಿಸುವ ನಿಟ್ಟಿನಲ್ಲಿ, ಯಜ್ಞಗಳನ್ನು ಸುಂಕ ನೀಡುವ ವಿಚಾರಕ್ಕೆ ಹೋಲಿಸಿರುವರು," ಯಾಕೆಂದರೆ, ಈ ಸುಂಕದಿಂದಲೇ, ರಾಜ್ಯದ ಮಂತ್ರಿಗಳ ವೆಚ್ಚವನ್ನು ಬರಿಸಲಾಗುತ್ತದೆ,[6] ಸ್ಥಳೀಯ ನಿಯಮವನ್ನು ಉಲ್ಲಂಘಿಸುವಾಗ, ನೀಡುವ ದಂಡಕ್ಕೆ ಆ ಯಜ್ಞವನ್ನು ಹೋಲಿಸಿ ರುವರು.[7]

ನಾಜೀರನ ವೃತದಲ್ಲಿ ಒಂದು ಸಮಸ್ಯೆ ಉದ್ಭವಿಸುತ್ತದೆ: ಅವನು ಯಜ್ಞಕ್ಕಾಗಿ ತಂಡದ ಒಂದು ಪಕ್ಷಿಯನ್ನು, "ಅವನ ಪಾಪದ ಒಡಂಬಡಿಕೆಗಾಗಿ ಯಜ್ಞಮಾಡಬೇಕಿತ್ತು ..." (ಅರಣ್ಯಕಾಂಡ 6:11). ಕೆಲವು ಸಾರಿ, ಜನರೊಂದಿಗಿನ ಸಂಬಂಧದ ಕಾರಣಕ್ಕಾಗಿ "ಪಾಪಪರಿಹಾರದ" ಯಜ್ಞವನ್ನು ಅರ್ಪಿಸುತ್ತಿದ್ದರೂ ಅರಣ್ಯಕಾಂಡ 6ರಂತೆ ಈ ಸಂಗತಿಗೂ ಹಾಗೂ ಯೆಹೂದ್ಯರಿಗೂ ನಡುವೆ ಯಾವ ಸಂಬಂಧವಿದೆ? ನಿಶ್ಚಯವಾಗಿಯೂ ಇದು ದೇವರೊಂದಿಗಿನ ಸಂಬಂಧವೆಂದು ಅವರು ತಮ್ಮ ಮನಸ್ಸಿನಲ್ಲಿ ತಿಳಿದುಕೊಂಡಿದ್ದರು. ಪ್ರಾಯಶಃ ಪೌಲನು ಸಮರ್ಪಿಸಿದ ಯಜ್ಞವು ಆತನ ಆತ್ಮದ ರಕ್ಷಣೆಗೆ ಯಾವ ರೀತಿಯಾದ ಸಂಬಂಧವನ್ನು ಹೊಂದಿರಲಿಲ್ಲ, ಆದರೆ ಯಾಜಕರು ಈ ವಿಷಯವನ್ನು ಅರಿತಿದ್ದರೇ? ಪೌಲನು ಈ ಏರ್ಪಾಟನ್ನು ಮಾಡುವಾಗ, ಅದನ್ನು ಗಮನಿಸಿದ ಯೆಹೂದ್ಯರು ಇದನ್ನು ಅರ್ಥಮಾಡಿಕೊಂಡರೇ? ಹೇಗೂ, ಪೌಲನ ಈ ಕ್ರಿಯೆಯು ಪ್ರಶ್ನಾರ್ಥವಾಗಿರುತ್ತದೆ ಎಂಬದನ್ನು ನಾನು ತಿಳಿಸಲು ವಿಷಾದಿಸುತ್ತೇನೆ.

**ಒಂದು ಯೋಗ್ಯವಾದ "ಇಲ್ಲ" ಎಂಬ ಉತ್ತರ**

ಪೌಲನ ಈ ಕ್ರಿಯೆಯನ್ನು ಪ್ರತಿಪಾದನೆ ಮಾಡದೆ, ಈ ವಿಷಯದಲ್ಲಿ ಅನುಕಂಪ

ಪಡುವ ಅನೇಕರ ವಿಚಾರಕ್ಕೆ ನಾನು ಸಹ ಬದ್ಧನಾಗಿದ್ದೇನೆ. ಸನ್ನಿವೇಶಕ್ಕೆ ಅನುಗುಣವಾಗಿ ಪೌಲನ ಕ್ರಿಯೆಗಳಿದ್ದವೇ ವಿನಃ, ಅವನು ಯಜ್ಞವನ್ನು ಸಮರ್ಪಿಸುವ ಕಾರ್ಯಕ್ಕೆ ಒಳಗಾಗದೆ ಇರಬಹುದು.

ಈ ಗುಂಪಿನವರು "ಪಾಪ" ಎಂಬ ಪದದ ಬದಲು "ತಪ್ಪು" ಎಂಬ ಪದ ಪ್ರಯೋಗ ಮಾಡಿರುವರು. "ತಪ್ಪು" ಎಂಬ ಪದದಲ್ಲಿ ವ್ಯತ್ಯಾಸವಿದ್ದರೂ, ಅದು ಸಮಂಜಾಸ್ಪದವಾಗಿದೆ. ನಾನು ಗೌರವಿಸುವ ಒಬ್ಬ ಬೋಧಕ ಹಾಗೂ ಉಪದೇಶಕನು, ಪೌಲನು ತಪ್ಪು ಮಾಡಿದನು ಎಂದು ಬೋಧಿಸುವೆ ಎಂದು ಬರೆದಿರುವನು.[8] ಈ ಹಿಂದಿನ ಪಾಠದ ಆರಂಭದಲ್ಲಿ ನಾನು ಕ್ಯಾಬೆಂಲ್ ಮಾರ್ಗನ್‌ರವರನ್ನು ಉಲ್ಲೇಖಮಾಡಿರುವೆನು, "ಈ ಸಂದರ್ಭದಲ್ಲಿ ಪೌಲನು ತನ್ನ ಸೇವಾ ಜೀವಿತದಲ್ಲಿ ಅತಿದೊಡ್ಡ ತಪ್ಪನ್ನು ಮಾಡಿದನು" ಎಂದು ಅವರು ಬರೆದಿರುವರು.

ಸತ್ಯವೇದದ ಎಲ್ಲರ ಉತ್ತಮವಾದ ವ್ಯಕ್ತಿಗಳ ಕ್ರಿಯೆಗಳನ್ನು ನಾವುಗಳು ತೀರ್ಪು ಮಾಡುವ ಅಗತ್ಯವಿರುವದಿಲ್ಲ. ಹಿರಿಯರಾಗಿದ್ದರೂ - ಅವರು - ತಪ್ಪೆಸಗಿದ್ದರು, ಹಾಗೂ ಪ್ರೇರಿತರಾದ ಮನುಷ್ಯರು ಸಹ ತಪ್ಪೆಸಗಿರುವರು (ಗಲಾತ್ಯ 2:11-14), ಪೌಲನು ತನ್ನನ್ನು ತಾನೇ ಪಾಪಿಯೆಂದು ಕರೆದಿರುವನು (ರೋಮಾಪುರ 3:23) ಪರಿಪೂರ್ಣನಲ್ಲ ಎಂದಿರುವನು (ಫಿಲಿಪ್ಪಿ 3:12).[9]

**ಯೋಗ್ಯಕರವಲ್ಲದ "ಇಲ್ಲ!" ಎಂಬ ಒಂದು ಉತ್ತರ**

ಕಡಿಮೆ ಸಂಖ್ಯೆಯ ಜನರು - ಬಹುಶಃ ಪೌಲನ ಕಾರ್ಯವು ತಪ್ಪೇ ಆದರೂ, ಅವನ ಕಾರ್ಯಕ್ಕೆಕಾರಣಗಳೇ ಇರಲಿಲ್ಲ! ಜನರ ಹೇಳಿಕೆಯು ಸರಿಯಾಗಿಯೇ ಇರಬಹುದು, ಅದು ಮೂಲ ನಿಯಮಗಳನ್ನು ಮೀರಿದ್ದರು, ಇತರರ ಕ್ರಿಯೆಗಳು ಇದರಲ್ಲಿ ಒಳಗೊಂಡಿರುತ್ತವೆ (1 ಕೊರಿಂಥ 13:7).

## ದೇವರ ನಿರ್ಣಾಯಕ ನುಡಿ

ಪೌಲನು ಕ್ರಿಯೆಗಳ, ದೇವರ ದೃಷ್ಟಿಕೋನವನ್ನು ನಾವು ಅರಿಯದೆ ಇರುವದರಿಂದ, ನಾವುಗಳು ಸಹ ಪೌಲನ ಈ ಕಾರ್ಯದ ಕುರಿತು ತೀರ್ಪು ಮಾಡಲು ಹಿಂಜರಿಯಬೇಕು. ಯಜ್ಞದ ಕುರಿತ ಎರಡನೆಯ ಪ್ರಶ್ನೆಗೆ, ದೇವರು ಹೇಳಿರುವ ಮಾತನ್ನು - ನಾವು ಕೇಳಲೇಬೇಕು. ಪೌಲನೇ ಆಗಲೀ ಅಥವಾ ಇತರೆ ಯಾರೋ ಆಗಲಿ ರಕ್ತದ ಯಜ್ಞವನ್ನು ಸಮರ್ಪಿಸಲೇ ಬಾರದು.

**ಒಂದು ನಿರ್ಧಿಷ್ಟವಾದ ಪ್ರತಿಪಾದನೆ**

ಪೌಲನು ಕೆಲ ಕಾಲ ದೇವಾಲಯದಲ್ಲಿ ಇದ್ದ ನಂತರ, ದೇವರು ಇಬ್ರಿಯ ಪತ್ರಿಕೆಯ ಬರಹವನ್ನು ಉಂಟುಮಾಡಿದನು[10] ಬಹುಶಃ ಪೌಲ ಅಥವಾ ಅವನ ಸ್ನೇಹಿತರಲ್ಲಿ ಒಬ್ಬನು ಅದನ್ನು ಬರೆದಿರಬಹುದು, ಅದನ್ನು ಇಬ್ರಿಯರಿಗೆ (ಯೆಹೂದ್ಯರಿಗೆ) ಬರೆಯಲಾಗಿದೆ. ಆ ಕ್ರೈಸ್ತರು ತಮ್ಮ ಹಿಂದಿನ ಮಾರ್ಗಕ್ಕೆ ಹಿಂದಿರುಗಲು ಸಜ್ಜಾಗಿದ್ದರು. ಕ್ರೈಸ್ತತ್ವದಲ್ಲಿರುವದೆಲ್ಲವು ಉತ್ತಮವೇ ಅದನ್ನು ತೊರೆದು ಹೋಗುವದು ಮೂರ್ಖತನದ ನಾಶನ ವಾಗಿದೆ ಎಂದು ಅದರ ಬರಹಗಾರನು ತಿಳಿಸಿರುವನು. ಡೋನಾಲ್ಡ್ ಬಾರ್ನ್‌ಹೌಸ್ ಅದನ್ನು: "ಇಬ್ರಿಯರು, ಇಬ್ರಿಯರಾಗಿಯೇ ಜೀವಿಸಬಾರದೆಂದು, ಇಬ್ರಿಯ ಪತ್ರಿಕೆಯು ಬರೆಯಲ್ಪಟ್ಟಿದೆ" ಎಂದು ಹೇಳಿರುವರು![11] 7ರಿಂದ 10ನೇ ಅದ್ಯಾಯಗಳು ಪ್ರಮುಖವಾಗಿವೆ. ಅದ್ಯಾಯ 7 ಮತ್ತು 8ರಲ್ಲಿ ಅರೋನನ ಯಾಜಕ ವೃತ್ತಿಯು ಅಂತ್ಯಗೊಂಡಿದೆ ಎಂದು ಬರಹಗಾರನು ತಿಳಿಸಿರುವನು. ಅಧ್ಯಾಯ 9 ಮತ್ತು 10 ಯೇಸುವಿನ ಯಜ್ಞವು ಸಕಲವಾದ ಮೂಕ ಪ್ರಾಣಿಗಳ ಯಜ್ಞವನ್ನು ಇಲ್ಲದಂತೆ ಮಾಡಿದೆ ಎಂದು ತಿಳಿಸುತ್ತದೆ. ಆ ನಾಲ್ಕು ಅಧ್ಯಾಯಗಳನ್ನು

ಗಂಭೀರ ವಾಗಿ ಓದಿರಿ. ಈ ಕ್ಷಣದಲ್ಲಿ ಯಜ್ಞಕ್ಕೆ ಸಂಬಂಧಪಟ್ಟ ಒಂದು ವಾಕ್ಯಭಾಗವನ್ನು ನೋಡೋಣ:

> ಪಾಪಗಳ ಜ್ಞಾಪಕವಾಗುವದುಂಟು; ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ. ಆದದರಿಂದ ಕ್ರಿಸ್ತನು ಭೂಲೋಕದೊಳಗೆ ಬರುವಾಗ - (ದೇವರೇ) ಯಜ್ಞನೈವೇದ್ಯಗಳು ನಿನಗೆ ಇಷ್ಟ ವಾ ಗಿರ ಅಲ್ಲ, ನನಗೆ ದೇಹವನ್ನು ಸಿದ್ಧಮಾಡಿಕೊಟ್ಟೆ; ಸರ್ವಾಂಗಹೋಮಗಳಲ್ಲಿಯೂ ದೋಷ ಪರಿಹಾರಕ ಯಜ್ಞಗಳಲ್ಲಿಯೂ ನೀನು ಸಂತೋಷಪಡಲಿಲ್ಲ; ಆಗ ನಾನು - ಇಗೋ, ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ. ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ ಎಂದು ಹೇಳಿದೆನು ಅನ್ನುತ್ತಾನೆ. ಧರ್ಮಶಾಸ್ತ್ರದ ಪ್ರಕಾರ ಸಮರ್ಪಣೆಯಾಗುತ್ತಾ ಬರುವ ಯಜ್ಞನೈವೇದ್ಯಗಳೂ ಸರ್ವಾಂಗ ಹೋಮಗಳೂ ದೋಷ ಪರಿಹಾರಕ ಯಜ್ಞಗಳೂ ನಿನಗೆ ಇಷ್ಟವಾಗಿರಲಿಲ್ಲ; ನೀನು ಅವುಗಳಲ್ಲಿ ಸಂತೋಷ ಪಡುವದಿಲ್ಲ ಎಂದು ಮೇಲೆ ಹೇಳಿದ ತರುವಾಯ - ಇಗೋ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ ಎಂದು ಹೇಳಿದ್ದಾನೆ. ಆತನು ಎಡನೆಯದನ್ನು ಸ್ಥಾಪಿಸುವದಕ್ಕಾಗಿ ಮೊದಲನೆಯದನ್ನು ತೆಗೆದುಬಿಡುತ್ತಾನೆ. ಯೇಸು ಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆಮಾಡಿ ದೇವರ ಚಿತ್ತವನ್ನು ನೆರವೇರಿ ಸಿದದರಿಂದಲೇ ನಾವು ಶುದ್ಧರಾದೆವು. ಇದಲ್ಲದೆ ಆ ಯಾಜಕರೆಲ್ಲರು ದಿನಾಲು ಸೇವೆ ಮಾಡುತ್ತಾ ಎಂದಿಗೂ ಪಾಪನಿವಾರಣೆ ಮಾಡಲಾರದಂಥ ಒಂದೇ ವಿಧವಾದ ಯಜ್ಞಗಳನ್ನು ಪದೇ ಪದೇ ಸಮರ್ಪಿಸುತ್ತಾ ನಿಂತುಕೊಂಡಿರುವರು. ಆದರೆ ಈ ಯಾಜಕನು ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲಗಡೆಯಲ್ಲಿ ಕೂತುಕೊಂಡನು.ಅಂದಿನಿಂದ ತನ್ನ ವಿರೋಧಿಗಳು ತನ್ನ ಪಾದ ಪೀಠವಾಗಿ ಹಾಕಲ್ಪಡುವ ತನಕ ಆತನು ಕಾದಿರುವನು. ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ. ಪವಿತ್ರಾತ್ಮನು ಸಹ ನಮಗೆ ಸಾಕ್ಷಿಕೊಡುವವನಾಗಿ - ಆ ದಿನಗಳು ಬಂದ ಮೇಲೆ ನಾನು ಅವರ ಸಂಗಡ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು - ನನ್ನ ಆಜ್ಞೆಗಳನ್ನು ಅವರ ಹೃದಯದಲ್ಲಿ ಇಡುವೆನು, ಅವರ ಮನಸ್ಸಿನ ಮೇಲೆ ಅವುಗಳನ್ನು ಬರೆಯುವೆನು. ಎಂದು ಕರ್ತನುನುಡಿಯುತ್ತಾನೆ ಎಂಬುದಾಗಿ ಹೇಳಿದ ಮೇಲೆ ಇನ್ನು - ಅವರ ಪಾಪಗಳನ್ನೂ ಅವರ ದುಷ್ಕೃತ್ಯಗಳನ್ನೂ ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಎಂದು ಹೇಳುತ್ತಾನೆ. ಪಾಪಗಳು ಪರಿಹಾರವಾದಲ್ಲಿ ಇನ್ನೂ ಅವುಗಳ ವಿಷಯದಲ್ಲಿ ಸಮರ್ಪಣೆ ಮಾಡುವದು ಅವಶ್ಯವಿಲ್ಲ (ಇಬ್ರಿಯ 10:4-18).

ಇಬ್ರಿಯ ಉಪದೇಶವು ಸಾಮಾನ್ಯವಾದ ಪ್ರಭಾವವನ್ನು ಕ್ರೈಸ್ತರ ಮೇಲೆ ಬೀರುತ್ತದೆ, ಬರ್ಟನ್ ಕಾಫ್‌ಮನ್‌ರವರ ಪ್ರಕಾರ, "ಲೂಸಿಯಸನ, ಪೌಲನನ್ನು ದೇವಾಲಯದ ದೊಂಬಿಯ ಜನರಿಂದ ರಕ್ಷಿಸಿದ ನಂತರ, ಯಾವುದೇ ಕ್ರೈಸ್ತರು ಯೆಹೂದ್ಯರ ಆಲಯದಲ್ಲಿ ಕಾಲಿಟ್ಟಿರುವ ಪ್ರಮಯವಿರುವದಿಲ್ಲ!"[12]

### ನಿಶ್ಚಯವಾದ ನಿರ್ಧಾರದ ಒಂದು

ಒಂದು ವೇಳೆ ಯಾರಿಗಾದರು ಈ ಸಂದೇಶವು ಅರ್ಥವಾಗದೇ ಇದ್ದರೆ, ಕೆಲವು ವರ್ಷಗಳ ನಂತರ ದೇವಾಲಯವನ್ನು ನಾಶಮಾಡುವ ಮೂಲಕ, ದೇವರು ಈ ಯಜ್ಞಗಳಿಗೆ ಅಂತಿಮವಾದ ತೆರೆಯನ್ನು ಎಳೆದನು. ಕಾಫ್‌ಮನ್‌ರವರ ಪ್ರಕಾರ, (ದೇವಾಲಯವು) ಇದಕ್ಕೆ ಸಂಬಂಧಪಟ್ಟ ಕಾರ್ಯಗಳು ಯೆಹೂದ್ಯರ ಮೇಲೆ ಅಪಾರವಾದ ಪ್ರಭಾವವನ್ನು ಬೀರಿದ್ದರಿಂದ, "ದೇವರು ಅವರನ್ನು ಯೆಹೂದತ್ವದಿಂದಲೇ ಎಳೆದು ಬಿಟ್ಟನು."[13] ದೇವಾಲಯದ ನಾಶನದ ಕುರಿತು, ಅಡಮ್ ಕ್ಲಾರ್ಕ್‌ರವರು "ದೇವರು ಅವರಿಗೆ ನೀಡಿರುವ ಅವಕಾಶದ ಮೂಲಕ,

ಅವುಗಳ ಆಚರಣೆಯು ಅಸಾಧ್ಯವಾಗುವಂತೆ, ದೇವರು ಮೋಶೆಯ ಧರ್ಮಶಾಸ್ತ್ರವನ್ನು ಇಲ್ಲದಂತೆ ಮಾಡಿರುವನು."[14]

ಕ್ರಿ.ಶ. 70ರಲ್ಲಿ ಉಂಟಾದ ದೇವಾಲಯದ ನಾಶನ ಹಾಗೂ ಯಜ್ಞಗಳ ನಿಲುಗಡೆಯ ಕುರಿತು ಅನೇಕ ದಿವಸಗಳ ಹಿಂದೆಯೇ ಮುಂತಿಳಿಸಲಾಗಿತ್ತು. ಪರಿಶುದ್ಧವಾದ ಸ್ಥಳವನ್ನು ತುಳಿದು ಹಾಕುವರು ಎಂದು ದಾನಿಯೇಲನು ಮುಂತಿಳಿಸಿದ್ದನು (ದಾನಿಯೇಲ 8:13). ಪಟ್ಟಣವನ್ನು ಪವಿತ್ರಾಲಯವನ್ನು ಹಾಳು ಮಾಡುವರು (9:26), "ನಿತ್ಯ ಹೋಮವು" ನೀಗಿಸಲ್ಪಡುವದು" (9:27). ಭಯಂಕರವಾದ ಸಂಕಟಗಳ ಕುರಿತು ಪ್ರವಾದಿಯ ಮಾತನಾಡಿ (12:11).[15] "ನಿಶ್ಚಿತನಾಶನವು" ಸಂಭವಿಸುವವು ಎಂದಿರುವನು (9:26, 27). ಮತ್ತು ಸುಮಾರು ಆರು ನೂರು ವರ್ಷಗಳ ನಂತರ, ಯೇಸು ದೇವಾಲಯವನ್ನು ಬಿಟ್ಟು ಹೋಗುವಾಗ, ತನ್ನ ಶಿಷ್ಯರಿಗೆ ಗಾಬರಿ ಪಡಿಸುವಂತೆ, "ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವದಿಲ್ಲ, ಎಲ್ಲಾ ಕೆಡವಲ್ಪಡುವದು" ಎಂದು ತಿಳಿಸಿದನು (ಮತ್ತಾಯ 24:2ಬಿ) ಈ ಹೇಳಿಕೆಯ ಕುರಿತು ಆತನನ್ನು ಪ್ರಶ್ನಿಸಲಾಗಿ, ಆವನು ದಾನಿಯೇಲನ ಪ್ರವಾದನೆಯನ್ನು ಉಲ್ಲೇಖಿಸಿ, "ಹಾಳು ಮಾಡುವ" "ಅಸಹ್ಯವಾದ" ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುತ್ತದೆ ಎಂದು ಉತ್ತರಿಸಿದನು (ಮತ್ತಾಯ 24:15; ವಚನ 21).[16] ನಾಲ್ವತ್ತು ವರ್ಷಗಳ ನಂತರ ರೋಮಾಯ ಸೈನಿಕರು ಯೆರೂಸಲೇಮನ್ನು ನಾಶಮಾಡಿದರು - ಅದರಲ್ಲಿ ದೇವಾಲಯವೂ ಸಹ ಒಳಗೊಂಡಿತ್ತು "ಈ ಕಾರ್ಯವು ಸಂಭವಿಸಿದಾಗ ಯೆಹೂದ್ಯರ ಯಜ್ಞಗಳು ಸಹ ನಿಂತುಹೋದವು."[17]

ಈ ದಿವಸದ ಯೆಹೂದ್ಯರಾಗಲಿ ಅನ್ಯರಾಗಲೀ ಇತರೆ ಯಾರೇ ಭೂಮಿಯಲ್ಲಿರುವ ಯಾವುದೇ ಯಾಜಕನಾಗಲೀ ಒಳಗೆ ಹೋಗುವ ಅಗತ್ಯವಿಲ್ಲ, ಆದರೆ, "ಯೇಸುವೆಂಬ ... ಮಹಾಯಾಜಕನ ಬಳಿಗೆ ಬರಬೇಕಷ್ಟೆ" (ಇಬ್ರಿಯ 4:14). "ಆತನು ಪರಲೋಕದೊಳಗೆ ಮಹತ್ವವುಳ್ಳ ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದಂಥ ಮಹಾಯಾಜಕನಾಗಿದ್ದಾರೆ" (8:1). ಹೋರಿ ಹಾಗೂ ಹೋತಗಳನ್ನು ಯಜ್ಞಮಾಡುವ ಅಗತ್ಯವಿಲ್ಲ (10:4), ಅದದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರ ಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. "ಆತನನ್ನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ" (13:15). ಯೇಸುವೇ ಪರಿಪೂರ್ಣ ಯಜ್ಞವಾಗಿದ್ದಾನೆ (9:26)!

## ಮುಕ್ತಾಯ

ಪೌಲನು ದೇವಾಲಯದ ಯಜ್ಞದಲ್ಲಿ ತೊಡಗಿಸಿಕೊಂಡ ಕುರಿತು ಎರಡು ಪಾಠಗಳನ್ನು ಕಲಿತ್ತಿದ್ದರೂ, ಅಡಮ್ ಕ್ಲಾರ್ಕ್‌ರವರ ಸಂಗಡ: "ಈ ಒಂದು ಬದಲಾವಣೆಯ ವಿಚಾರದಲ್ಲಿ ಪೂರ್ಣವಾದ ಗ್ರಹಿಕೆಯನ್ನು ಹೊಂದಲು ಅಸಾಧ್ಯ."[18] ಒಂದು ಸಹಜವಾದ ನಿರ್ಣಯವೇ ನೆಂದರೆ: ಹಳೆಯ ಮಾರ್ಗಗಳು ಸತ್ತಿವೆ, ಅದು ಇನ್ನು ಇರುವದಿಲ್ಲ. ಯೆರೂಸಲೇಮಿನ ಹಿರಿಯರು ಈ ವಿಷಯದಲ್ಲಿ ಗೊಂದಲಕ್ಕೊಳಗಾದರು. ಪೌಲನೂ ಗೊಂದಲಕ್ಕೊಳಗಾದನು, ನಾನು ಮತ್ತು ನೀನು ಸಹ ಗೊಂದಲಕ್ಕೊಳಗಾಗುತ್ತೇವೆ. ಈ ಸಂಗತಿ ಹಳೆಯದೋ ಅಥವಾ ಹೊಸದೋ ಎಂಬುದಾಗಿರದೆ, ಅದು ಸರಿಯೋ ಅಥವಾ ತಪ್ಪೋ ಎಂಬ ಅಂಶವಾಗಿರುತ್ತದೆ - ಆದರೆ ದೇವ ವಾಕ್ಯ ಮಾತ್ರ ಅದರ ಕುರಿತು ತೀರ್ಪು ಹೇಳುತ್ತದೆ! ದೇವರ ವಾಕ್ಯಕ್ಕೆ ನಿಮ್ಮನ್ನು ಸಮರ್ಪಿಸಿಕೊಳ್ಳುವ ಸಮಯವಾಗಿದೆ!

ಟಿಪ್ಪಣಿಗಳು

[1]*ಅಪೊಸ್ತಲರ ಕೃತ್ಯಗಳು, 3ನೇ* ಪುಸ್ತಕದಲ್ಲಿ "ಒಂದು ಹೊಸದಾದ ತಂಡ - ಮತ್ತು ಹೆಚ್ಚಿನವರು" ಎಂಬ ಪಾಠದಲ್ಲಿ ತಿಮೊಥಿಯ ಸುನ್ನತಿಯ ಬಗ್ಗೆ ಇರುವ ಚರ್ಚೆಯನ್ನು ಸೇರಿಸಲಾಗಿದೆ. [2]*ಅಪೊಸ್ತಲರ ಕೃತ್ಯಗಳು, 1ನೇ* "ಕ್ರೈಸ್ತ ಹಾಗೂ ಸರ್ಕಾರ" ಎಂಬ ಪಾಠವನ್ನು ನೋಡಿರಿ. [3]ದೇವರು ಯೊಧ್ಯರಿಗೆ ಈ ಗೌರವನನ್ನು ನೀಡಿರುವದಿಲ್ಲ; "ಕೃಪಾ ಸಮಯ" ಎಂಬ ಹೇಳಿಕೆಯನ್ನು ನಾನು ಮೆಚ್ಚುತ್ತೇನೆ. [4]Matthew Henry, *Commentary on the Whole Bible* (Grand Rapids, Mich.: Zondervan Publishing House, 1961), 1723. [5]ಇಬ್ರಿಯರಿಗೆ ಬರೆದ ಸಮಯವನ್ನು ತಿಳಿದಿರುವದಿಲ್ಲ. ಯಾಜಕ ವೃತ್ತಿಯ ಕುರಿತು ಅದು ಸೂಚಿಸುವದರಿಂದ (10:11), ಕ್ರಿ.ಶ. 70ರಲ್ಲಿ ದೇವಾಲಯ ನಾಶವಾಗುವ ಮನ್ನವೇ ಬರೆದಿರಬಹುದು. ಕ್ರಿ.ಶ. 57ರಲ್ಲಿ ಪೌಲನನ್ನು ಹಿಡಿಯುವ ಮೊದಲೇ ಬರೆದಿರಬಹುದೆಂಬ ಶಂಕೆಯನ್ನು ಹೊಂದಬಹುದು. [6]Adam Clarke, *The Holy Bible With a Commentary and Critical Notes*, vol. 5, *Matthew-Acts* (Nashville: Abingdon Press, n.d.), 861. [7]ಸ್ವಂತ ದೂರವಾಣಿ ಕರೆ, 8 ಜನವರಿ 1996. [8]Roy H. Lanier, Jr., ಸ್ವಂತ ಪತ್ರ 7 ಡಿಸೆಂಬರ್ 1995. [9]ತಪ್ಪಾಭಿಪ್ರಾಯವನ್ನು ಒಪ್ಪಿಕೊಂಡ ವಿಚಾರಕ್ಕೆ ಅಪೊಸ್ತಲರ ಕೃತ್ಯಗಳು 23:5 ನೋಡಿರಿ. [10]ನೋಡಿರಿ 5ರ ಟಿಪ್ಪಣಿ.

[11]Quoted in Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 490. [12]James Burton Coffman, *Commentary on Acts* (Austin, Tex.: Firm Foundation Publishing House, 1976), 8. [13]Ibid., 408. [14]Clarke, 859. (ಒತ್ತಿ ಹೇಳಿದ್ದು ನನ್ನದು.) [15]ದಾನಿಯೇಲನಿಂದ ಪಡೆದ ವರದಿ, ಈ ಪುಸ್ತಕವನ್ನು ಹೊರತು ಪಡಿಸಿರುತ್ತದೆ. [16]ಶಿಷ್ಯರು ಒಂದು ಪ್ರಶ್ನೆ (ದೇವಾಲಯ ನಾಶವಾದನಂತರ, ಅಂತ್ಯ ಸಂಭವಿಸುತ್ತದೆ ಎಂದು ತಿಳಿದರು) ಅವರು ದೇವಾಲಯದ ನಾಶ ಹಾಗೂ ಪ್ರಪಂಚದ ಅಂತ್ಯದ ಪ್ರಶ್ನೆಯನ್ನು ಕೇಳುತ್ತಿದ್ದರು. ಆದ್ದರಿಂದ ಮೊದಲನೆಯ ಅಧ್ಯಾಯದಲ್ಲಿ, ಯೆರೂಸಲೇಮಿನ ನಾಶನದ ಕುರಿತಾಗಿರುತ್ತದೆ. ಅದರ ಕೊನೆಯ ಭಾಗದಲ್ಲಿ ಪ್ರಪಂಚದ ಅಂತ್ಯದ ಕುರಿತಾಗಿರುತ್ತದೆ. [17]Richard Oster, *The Acts of the Apostles,* The Living Word Commentary Series, Part 2 (Austin, Tex.: Sweet Publishing Co., 1979), 124. ಕ್ರೈಸ್ತ ಯೆಹೂದ್ಯರು ಆಲಯಕ್ಕೆ ಬರುವದನ್ನು ನಂತರದಲ್ಲಿ ಯೆಹೂದ್ಯರೆ ನಿರ್ಣಯಿಸಿದರು. ಮೊದಲ ಶತಮಾನದ ಹಿತದಲ್ಲಿ, "ನಾಜೀರಾರು ಹಾಗೂ ಯೆಹೂದ ಮತಾವಲಂಭಿಗಳು ನಾಶವಾಗಲಿ ಮತ್ತು ಅವರ ಹೆಸರುಗಳು ಜೀವಬಾದ್ಯರ ಪಟ್ಟಿಯಲ್ಲಿ ಇರಬಾರದೆಂದು" ಎಂಬ ಪ್ರಾರ್ಥನೆ ಮಾಡಿದ್ದರು (quoted in F. F. Bruce, *The Book of Acts*, rev. ed. [Grand Rapids, Mich.: Wm. B. Eerdmans Publishing Co., 1988], 428). [18]Clarke, 860.